ಸಾಕ್ಷಿಯನ್ನು ದಿಃ **25-11-2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಸಿ ಎಸ್ , ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿಯ ಅಧಿಕಾರ ಪತ್ರವನ್ನು ಹೊಂದಿದ್ದು ಅದನ್ನು ಹಾಜರುಪಡಿಸಿದ್ದು ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1 ರ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ದಾವಾ ಸ್ವತ್ತಿನ ಐ ಎಲ್ ನ ದೃಢೀಕೃತ ನಕಲನ್ನು ನಿಪಿ-2 ಎಂದು, ಘಸಲು ಮತ್ತು ಸರಹದ್ದು ಗುರುತಿನ ಬಗ್ಗೆ 5 ದಾಖಲೆಗಳ ದೃಢೀಕೃತ ನಕಲುಗಳನ್ನು ನಿಪಿ-3 ರಿಂದ 7 ಎಂದು , ದಾವಾ ಸ್ವತ್ತಿನ ಬಗ್ಗೆ 4 ಪಹಣಿಗಳ ದೃಢೀಕೃತ ನಕಲುಗಳನ್ನು ನಿಪಿ-8 ರಿಂದ 11 ಎಂದು , ದಾವಾ ಸ್ವತ್ತಿನ 6 ಪಹಣಿಗಳನ್ನು ನಿಪಿ-12 ರಿಂದ 17 ಎಂದು , ಎಂ ಆರ್ ನಂ. ಟಿ 26/2015-16 ನ್ನು ನಿಪಿ-18 ಎಂದು , ಎಂ ಆರ್ ನಂ.ಹೆಚ್ 11/2012-13 ನ್ನು ನಿಪಿ-19 ಎಂದು , ಎಂ ಆರ್ ನಂ.ಹೆಚ್ 11/2012-13 ರಲ್ಲಿ ಆದ ಆದೇಶದ ದೃಢೀಕೃತ ನಕಲನ್ನು ನಿಪಿ-20 ಎಂದು, ನೋಟೀಸಿನ ದೃಢೀಕೃತ ನಕಲನ್ನು ನಿಪಿ-21 ಎಂದು, 3 ಇಸಿ ಗಳನ್ನು ನಿಪಿ-22 ರಿಂದ 24 ಎಂದು, ಎಂ ಆರ್ ನಂ.ಹೆಚ್ 42/2011-12 ನ್ನು ನಿಪಿ-25 ಎಂದು, ನರಸಿಂಹಶೆಟ್ಟಿರವರ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ-26 ಎಂದು, ಉಪ ತಹಶೀಲ್ದಾರ್ ರವರು ನೀಡಿದ ಹಿಂಬರಹವನ್ನು ನಿಪಿ-27 ಎಂದು, ದಿನಾಂಕಃ 12.05.1975 ರ ಬೋಗ್ಯ ಪತ್ರದ ದೃಢೀಕೃತ ನಕಲನ್ನು ನಿಪಿ-28 ಎಂದು, ಆರ್ ಎ ನಂ.131/2013-14 ರ ಆದೇಶಿಕ ಹಾಳೆಯ ದೃಢೀಕೃತ ನಕಲನ್ನು ನಿಪಿ-29 ಎಂದು, ಸದರಿ ಪ್ರಕರಣದಲ್ಲಿ ದಿನಾಂಕಃ 26.09.2018 ರಂದು ಎಸಿ ರವರು ಮಾಡಿದ ಆದೇಶದ ದೃಢೀಕೃತ ನಕಲನ್ನು ನಿಪಿ-30 ಎಂದು, ಸದರಿ ಪ್ರಕರಣದಲ್ಲಿ ಸಲ್ಲಿಸಿದ ತಕರಾರಿನ ದೃಢೀಕೃತ ನಕಲನ್ನು ನಿಪಿ-31 ಎಂದು, ಸದರಿ ಪ್ರಕರಣದ ಮೇಲ್ಮನವಿ ಪತ್ರದ ದೃಢೀಕೃತ ನಕಲನ್ನು ನಿಪಿ-32 ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲವಾಕಾಶ ಕೋರಿದ್ದು ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

- ಸಹಿ -
(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.